ದಿನಾಂಕಃ 13.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಶ್ರೀ ಐ.ಎಸ್.ಟಿ. ವಕೀಲರಿಂದ ಆರೋಪಿ ಪರವಾಗಿ-</u>

8. ನಾನು ಆರೋಪಿತನ ಜೊತೆ ಮದುವೆಯಾದಾಗಿನಿಂದ ಅವರ ಜೊತೆ ಸುಖವಾಗಿ ಇದ್ದೆ ಎಂದರೆ ಸರಿ. ಆರೋಪಿತನು ನನ್ನನ್ನು ಮತ್ತು ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಎಂದರೆ ಸರಿ. ನಮ್ಮ ಮದ್ಯೆ ಇವತ್ತಿನವರಗೊ ಜಗಳವಾಗಲಿ ವೈಮನಸ್ಸಾಗಲಿ ಕಂಡುಬಂದಿರುವುದಿಲ್ಲ ಎಂದರೆ ಸರಿ.

9. ಆರೋಪಿತನು ಆಟೋ ಚಾಲಕನೆಂದರೆ ಸರಿ. ನಾನು ಮತ್ತು ಆರೋಪಿತನು ಜಮೀನಿನ ಕೂಲಿ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿ. ನಿಪಿ.1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಪೋಲೀಸರು ಹೇಳಿದ ಮೇರೆಗೆ ನಿಪಿ.1 ಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ. ನಮ್ಮ ಮನೆಯ ಬಾಗಿಲು ಸ್ವಲ್ಪ ಚಿಕ್ಕದಾಗಿದೆ ಎಂದರೆ ಸರಿ. ಮನೆಗೆ ನೇರವಾಗಿ ಹೋದರೆ ತಲೆ ತಾಗುವ ಸಾಧ್ಯತೆ ಇದೆ ಎಂದರೆ ಸರಿ. ಬಾಗಿಲಿಗೆ ತಗುಲಿದ್ದಲ್ಲಿ ಗಾಯವಾಗುವ ಸಾಧ್ಯತೆ ಇದೆ ಎಂದರೆ ಸರಿ. ನನಗೆ ಮನೆ ಬಾಗಿಲು ತಗುಲಿ ಗಾಯವಾಗಿರುತ್ತದೆ ಎಂದರೆ ಸರಿ. ಪೋಲೀಸರ ಚಿತಾವಣೆ ಮೇರೆಗೆ ನಾನು ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ.

10. ಈಗ ನಾನು ಮತ್ತು ಆರೋಪಿಯು ಪರಸ್ಪರ ಸಮ್ಮತಿ ಮೇರೆಗೆ ವಿವಾಹ ವಿಚ್ಛೇದನವನ್ನು ಪಡೆದಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

11. ನಾನು ಮತ್ತು ಆರೋಪಿಯ ಪರಸ್ಪರ ವಿವಾಹ ವಿಚ್ಛೇದನವನ್ನು ಪಡೆದಿದ್ದೇವೆ ಎಂದರೆ ಸರಿ. ನಾನು ಮತ್ತು ನನ್ನ ಮಗಳು ಪ್ರತ್ಯೇಕವಾಗಿ ಜೀವನವನ್ನು ಸಾಗಿಸುವ ಉದ್ದೇಶದಿಂದ ವಿವಾಹ ವಿಚ್ಛೇದನವನ್ನು ಪಡೆದಿದ್ದೇನೆ ಎಂದರೆ ಸರಿ. ನಾನು ವಿವಾಹ ವಿಚ್ಛೇದನವನ್ನು ಪಡೆದಿರುವ ಕಾರಣ ಈ ಮೊದಲು ನುಡಿದ ಸಾಕ್ಷ್ಯದಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಮೊದಲು ಮುಖ್ಯ ವಿಚಾರಣೆಯಲ್ಲಿ ನುಡಿದ ವಿಷಯ ಸತ್ಯವಾಗಿದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾಧ ಕುಲಕರ್ಣಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ